

# ಕನಸು ವಾಸ್ತವದ ನಡುವೆ ಬ್ಲ್ಯಾಂಕ್!

ಡ್ರಗ್ಸ್ ಮಾಫಿಯಾ ಮತ್ತು ಅದರ ದುಷ್ಪರಿಣಾಮಗಳ ಕುರಿತು ಈಗಾಗಲೇ ಹಲವು ಸಿನಿಮಾಗಳು ಬಂದು ಹೋಗಿವೆ. ಸುಹಾಸ್ ನಿರ್ದೇಶನದ, ಕೃಷಿ ತಾಪಂಡ ಮುಖ್ಯಭೂಮಿಕೆಯಲ್ಲಿರುವ 'ಬ್ಲ್ಯಾಂಕ್' ಸಿನಿಮಾದಲ್ಲಿಯೂ ಅದೇ ಎಳೆ ಇದ್ದರೂ, ಇದು ಹಳೆ ಜಾಡಿನ ಸಿನಿಮಾ ಅಲ್ಲ ಎನ್ನುತ್ತದೆ ಚಿತ್ರತಂಡ.

ನಿರ್ದೇಶಕರ ಪ್ರಕಾರ ಇದು 'ಲೂಸಿಯಾ' ಮಾದರಿಯ ಸಿನಿಮಾ. ಅಂದರೆ ಲೂಸಿಯಾದಲ್ಲಿ ಇರುವ ಹಾಗೆಯೇ ಕನಸು ಮತ್ತು ವಾಸ್ತವದ ನಡುವಿನ ಗೆರೆಯ ಆಚೆ ಈಚೆ ಸರಿಯುತ್ತಲೇ ಇಡೀ ಸಿನಿಮಾ ಬೆಳೆಯುತ್ತದೆ. ಮೈಸೂರಿನ ಮನೆಯೊಂದರಲ್ಲಿ ಮೂರು ದಿನಗಳಲ್ಲಿ ನಡೆಯುವ ಕಥೆಯನ್ನು ಕ್ರೈಮ್, ಥ್ರಿಲ್ಲರ್ ಮತ್ತು ಪ್ರೇಮ ಈ ಮೂರೂ ಅಂಶಗಳನ್ನೂ ಹದವಾಗಿ ಪಾಕಗೊಳಿಸಿ ಹೇಳಹೊರಟಿದ್ದಾರೆ ನಿರ್ದೇಶಕರು.

ಇಷ್ಟೇ ಅಲ್ಲ, ಈ ಚಿತ್ರದ ಕಥೆಗೂ '13' ಸಂಖ್ಯೆಗೂ ನಂಟಿದೆ ಎಂದೂ ಚಿತ್ರತಂಡ ಹೇಳಿಕೊಂಡಿದೆ. ಆ ನಂಟು ಏನು ಎಂಬುದನ್ನು ಚಿತ್ರಮಂದಿರಲ್ಲಿಯೇ ತಿಳಿದುಕೊಳ್ಳಿ ಎಂಬ ಕುತೂಹಲದ ಒಗ್ಗರಣೆಯನ್ನೂ ಹಾಕಿದೆ.

ಕೃಷಿ ತಾಪಂಡ ಅವರ ಜತೆಗೆ ಪೂರ್ಣಚಂದ್ರ ತೆರೆಯನ್ನು ಹಂಚಿಕೊಂಡಿದ್ದಾರೆ. ನಿರ್ದೇಶಕ ಸುಹಾಸ್ ಅವರಿಗೆ ಇದು ಮೊದಲನೇ ಸಿನಿಮಾ. 'ಈ ಚಿತ್ರದಲ್ಲಿ ಕಥೆಯೇ ಹೀರೊ ಹೀರೊಯಿನ್ ಎಲ್ಲ' ಎನ್ನುವುದು ಅವರ ವಿವರಣೆ.

ಎನ್.ಪಿ. ಮಂಜುನಾಥ ಪ್ರಸನ್ನ ಈ ಚಿತ್ರಕ್ಕೆ ಹಣ ಹೂಡಿದ್ದಾರೆ. ಈಗಾಗಲೇ ಮುಕ್ಕಾಲು ಭಾಗ ಚಿತ್ರೀಕರಣ ಮುಗಿದಿದೆ. ಹಾಡುಗಳ ಚಿತ್ರೀಕರಣವಷ್ಟೇ ಬಾಕಿ ಇದೆ. ಪ್ರಶಾಂತ್ ಸಿದ್ದಿ, ಭರತ್, ಸುಚೇಂದ್ರ ಪ್ರಸಾದ್ ತಾರಾಗಣದಲ್ಲಿದ್ದಾರೆ.

ಚಿತ್ರ: ಅಭಿಷೇಕ್ ಎಸ್.ಎನ್.

# ಕಲರಿಕಲೆಯ ದೇಹಿ

'ಕಲರಿಪಯಟ್ಟು' ಎಂಬ ಪ್ರಾಚೀನ ಸಮರಕಲೆ ಹಲವು ಸಿನಿಮಾಗಳಲ್ಲಿ ಬಳಕೆಯಾಗಿದೆ. ಆದರೆ ಆ ಕಲೆಯನ್ನೇ ಆಧರಿಸಿ ರೂಪಿಸಿರುವ ಸಿನಿಮಾ ಕನ್ನಡದಲ್ಲಿಯಂತೂ ಬಂದಿಲ್ಲ. ಈ ಕೊರತೆಯನ್ನು ತೊಡೆದುಹಾಕುವಂತೆ ಬೆಂಗಳೂರಿನ 'ಕಲರಿ ಗುರುಕುಲಂ'ನ ವಿದ್ಯಾರ್ಥಿಗಳೇ ಸೇರಿಕೊಂಡು 'ದೇಹಿ' ಎಂಬ ಸಿನಿಮಾ ರೂಪಿಸಿದ್ದಾರೆ. ಕಲರಿ ಗುರುಕುಲದ 50ಕ್ಕೂ ವಿದ್ಯಾರ್ಥಿಗಳು ನಟಿಸಿರುವ ಈ ಚಿತ್ರದ ಮುಖ್ಯಪಾತ್ರದಲ್ಲಿ ಕಿಶೋರ್ ಕಾಣಿಸಿಕೊಂಡಿರುವುದು ವಿಶೇಷ.

ಕಲರಿಪಯಟ್ಟು ಇಂದು ಹೆಣ್ಣಿನ ಆತ್ಮರಕ್ಷಣೆಗೆ ಹೇಗೆ ಸಹಾಯಕವಾಗಬಲ್ಲದು ಎಂಬುದನ್ನು ಈ ಸಿನಿಮಾ ಬಿಂಬಿಸುತ್ತದಂತೆ. ಧನ ಎನ್ನುವವರು ಈ ಚಿತ್ರಕ್ಕೆ ಆ್ಯಕ್ಷನ್ ಕಟ್ ಹೇಳಿದ್ದಾರೆ. ಕಥೆ, ಚಿತ್ರಕಥೆ, ಸಂಭಾಷಣೆಯನ್ನು ಜಯಮೋಹನ್ ಬರೆದಿದ್ದಾರೆ. ರಂಜನ್ ಮುಲ್ಲರಟ್ ಸಿನಿಮಾದಲ್ಲಿನ ಕಲರಿಪಯಟ್ಟಿನ ದೃಶ್ಯಗಳನ್ನು ಸಂಯೋಜಿಸಿದ್ದಾರೆ.

'ಇಂದು ನಮ್ಮ ಸಮಾಜದಲ್ಲಿ ಹೆಣ್ಣು ಎದುರಿಸುವ ಹಲವು ಬಗೆಯ ಸಮಸ್ಯೆ–ಸವಾಲುಗಳನ್ನು ಈ ಚಿತ್ರದಲ್ಲಿ ತೋರಿಸಿದ್ದೇವೆ. ಹಾಗೆಯೇ ಕಲರಿಪಯಟ್ಟನ್ನು ಬಳಸಿ ಆ ತೊಡಕುಗಳನ್ನು ಹೇಗೆ ಅವಳು ಯಶಸ್ವಿಯಾಗಿ ಎದುರಿಸಬಲ್ಲಳು ಎಂಬುದನ್ನೂ ಈ ಸಿನಿಮಾ ಹೇಳುತ್ತದೆ' ಎನ್ನುತ್ತಾರೆ ರಂಜನ್.

ಬೆಂಗಳೂರು, ಹಂಪಿ, ಬೇಲೂರಿನ ಸುತ್ತಮುತ್ತಲಿನ ಜಾಗಗಳಲ್ಲಿ ಚಿತ್ರೀಕರಣ ನಡೆಸಲಾಗಿದೆ. ಈಗಾಗಲೇ ಚಿತ್ರ ಬಹುತೇಕ ಪೂರ್ಣಗೊಂಡಿದೆ. ಆದರೆ ಚಿತ್ರದಲ್ಲಿ ಎರಡು ಸನ್ನಿವೇಶಗಳಲ್ಲಿ ಹಾಡು ಬೇಕು ಎಂದು ಅನಿಸಿದ್ದರಿಂದ ಆ ಹಾಡುಗಳ ಚಿತ್ರೀಕರಣ ಕೆಲಸ ನಡೆಯುತ್ತಿದೆ. ನೋಬಿನ್ ಪೌಲ್ ಸಂಗೀತ ಸಂಯೋಜನೆ ಮಾಡಿದ್ದಾರೆ.

ಕನ್ನಡ, ತಮಿಳು, ಮಲಯಾಳಂ ಭಾಷೆಗಳಲ್ಲಿ ಚಿತ್ರ ನಿರ್ಮಾಣವಾಗಿದೆ. ಮೊದಲಿಗೆ ಬೇರೆ ಬೇರೆ ಅಂತರರಾಷ್ಟ್ರೀಯ ಚಿತ್ರೋತ್ಸವಗಳಲ್ಲಿ ಪ್ರದರ್ಶನಕ್ಕೆ ಪ್ರಯತ್ನಿಸಿ ನಂತರ ಸೆಪ್ಟೆಂಬರ್ ತಿಂಗಳಲ್ಲಿ ಚಿತ್ರವನ್ನು ತೆರೆಗೆ ತರುವ ಆಲೋಚನೆಯಲ್ಲಿ ತಂಡವಿದೆ.

